

ರಕ್ತ ಧ್ವಜದ ಒಂದು ನೋಟ



ಮಿಡಿಯುತ್ತದೆ. ರಾಷ್ಟ್ರೀಯತೆಯ ಕುರಿತಂತೆ ಮೂರು ನಾಟಕಗಳನ್ನು ರಚಿಸಿ ನಿರ್ದೇಶನ ಮಾಡಿದ್ದಾರೆ ಅವರು.

## ಗಾಂಧಿಗೆ ಮರಣ ದಂಡನೆ

'ಉಷೋದಯದ ಬೆಳಗಿನಲ್ಲಿ, ಚಂದ್ರಮನ ಬೆಳಕಿನಲ್ಲಿ ನಾನೇ ಇರುವೆನು, ಬಿರಿವ ಹೂವ ದಳಗಳಲ್ಲಿ, ಸುರಿವ ಮೇಘ ಮಾಲೆಗಳಲ್ಲಿ ನಾನೆ ಬರುವೆನು.... ಅಷ್ಟ ದಿಕ್ಕಿನಲ್ಲಿ ಕಾಯುತ್ತಿರುವೆನು' ಎಂದು ಹೇಳುತ್ತಾ ಗಾಂಧೀಜಿ ನೇಣಿಗೆ ಕೊರಳು ಒಡ್ಡುತ್ತಾರೆ. ಆಗ ಮತ್ತೆ ಮತ್ತೆ ಹುಟ್ಟಿ ಬರುವ ಪ್ರತಿಜ್ಞೆ ಮಾಡುವ ಅವರು ತಮ್ಮ ಮುಂದಿನ ಅವತಾರದ ಉಗ್ರ ಸ್ವರೂಪವನ್ನು ಹೇಳುವುದು 'ಗಾಂಧಿ ಜಯಂತಿ' ನಾಟಕದ ಕೊನೆಯ ಸನ್ನಿವೇಶ.



ಯಮನ ವಿಚಾರಣೆಯ ಕಟಕಟೆಯಿಂದಲೇ ನಾಟಕ ತೆರೆದುಕೊಳ್ಳುತ್ತದೆ. ವಿಡಂಬನೆ ನೆಲೆಯ 'ಗಾಂಧಿ ಜಯಂತಿ' ಈ ದೇಶದಲ್ಲಿ ಆದರ್ಶ ಮರೆಯಾಗಿ ಭ್ರಷ್ಟಾಚಾರ ವಂಚನೆ ಹಿಂಸಾಚಾರ ರಾರಾಜಿಸುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ಗಾಂಧಿ ಮರು ಜನ್ಮತಾಳಿ ಬರುತ್ತಾರೆ. ದೇಶದ ಪರಿಸ್ಥಿತಿ ಕಂಡು ಮರುಗುತ್ತಾರೆ. ಚುನಾವಣೆಯ ಭ್ರಷ್ಟತನ, ನಕಲಿ ಮತದಾನಕ್ಕೆ ಮೂಕರಾಗುವ ಗಾಂಧಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ

## ಮಹಾತ್ಮರ ಸಂದೇಶ ನಿರಂತರ



ಹಳ್ಳಿಗಳಲ್ಲಿ ಜನಜಾಗೃತಿಗೆ ನಾಟಕ ದೊಡ್ಡ ಭೂಮಿಕೆಯನ್ನು ಕಲ್ಪಿಸಿದೆ. ಯಾಕೆ ನಮ್ಮನ್ನು ಬ್ರಿಟಿಷರು ಆಳಬೇಕು? ಸ್ವಾತಂತ್ರ್ಯದ ಮಹತ್ವ ಏನು? ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕು ಎನ್ನುವ ಅಂಶವನ್ನು ಸ್ವಾತಂತ್ರ್ಯ ಪೂರ್ವದ ರಂಗಭೂಮಿ ಹೇಳಿದೆ. 'ಸಿದ್ದಾರೂಢ ಮಹಾತ್ಮೆ' ನಾಟಕ ಇದ್ದಾಗಲೂ ಅದು ಸರ್ಕಾರದ ಕಣ್ಣು ತಪ್ಪಿಸುವ ತಂತ್ರವಾಗಿರುತ್ತಿತ್ತು. ಆ ಮೂಲಕ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುತ್ತಿದ್ದರು. ಏಣಗಿ ಬಾಳಪ್ಪ ಈ ರೀತಿಯ ಸಾಕಷ್ಟು ಕೆಲಸ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಬಾಲಗಂಧರ್ವ ಪ್ರಮುಖ ರಂಗ ನಟ. ಅವರು ತಮ್ಮ ಸ್ತ್ರೀ ಪಾತ್ರಗಳಿಂದಲೇ ಹೆಸರುವಾಸಿಯಾಗಿದ್ದರು. ಬಾಲಗಂಧರ್ವ ತಮ್ಮ ಸಂಪಾದನೆಯ ಮೊತ್ತವನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ದೇಣಿಗೆ ನೀಡುತ್ತಿದ್ದರು.

ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ರಂಗಭೂಮಿಯಲ್ಲಿ ನಿರಂತರವಾಗಿ ಇರಬೇಕು ಎನ್ನುವ ಆಶಯ ನನ್ನದು. ನಮಗೆ ಸ್ವಾಭಿಮಾನದ ಬದುಕು ನೀಡಿದ ಮಹಾತ್ಮರನ್ನು ಸ್ಮರಿಸಬೇಕು. ಆ ಮೂಲಕ ಒಬ್ಬರನ್ನು ಎತ್ತಿಕಟ್ಟುವುದು ತೆಗಳುವುದಕ್ಕಿಂತ ಸಾಮರಸ್ಯ ಕಾಪಾಡುವುದು ನನ್ನ ನಾಟಕದ ಪ್ರಮುಖ ಉದ್ದೇಶ. ಮಹಾತ್ಮರ ಹತ್ಯೆ ಆದ ಸಂದರ್ಭದಲ್ಲಿ ಅಲ್ಲಲ್ಲಿ ಹಿಂಸಾಚಾರ ನಡೆದವು. ಅಲ್ಲಿಯೂ ಸಾಮಾಜಿಕ ಸಾಮರಸ್ಯ ಕಾಪಾಡುವ ಮೂಲಕ ಮಹಾತ್ಮರ ನಿಲುವನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿಯೂ ಒಂದು ನಾಟಕವನ್ನು ಮಾಡಿದ್ದೆ.

—ಝುಕೀರ್ ನದಾಫ, ರಂಗಕರ್ಮಿ

## ಒಲಿದು ಬರುವ ಗಾಂಧಿ ಪಾತ್ರ



ಧಾರಾವಾಹಿ ಮತ್ತು 'ಶಿಪ್ಪಾರಳ್ಳಿ ತರ್ಲೆಗಳು' ಸಿನಿಮಾದಲ್ಲಿ ಗಾಂಧಿ ಪಾತ್ರ ಮಾಡಿದೆ. ಮೈಕೋ ಶಿವಣ್ಣ ನಿರ್ದೇಶನದ 'ಗಾಂಧಿ ಜಯಂತಿ' ನಾಟಕದಲ್ಲೂ ಅಭಿನಯಿಸಿದೆ. ತೆಲುಗು ಮೂಲ, ವಿಜಯ ಭಾಸ್ಕರ್ ರಚಿಸಿದ್ದಾರೆ. ಕನ್ನಡಕ್ಕೆ ಲಕ್ಷ್ಮೀದೇವಿ ತಂದಿದ್ದಾರೆ. ಹೈದರಾಬಾದಿನಲ್ಲಿ ಜರುಗಿದ ರಂಗ ಉತ್ಸವದಲ್ಲಿ 'ಗಾಂಧಿ ಜಯಂತಿ'ಯ ತೆಲುಗು, ಮಲೆಯಾಳಂ, ಕನ್ನಡ, ಹಿಂದಿ, ಇಂಗ್ಲಿಷ್ ಪ್ರದರ್ಶನಗಳನ್ನು ನೋಡಲು ಸಾಧ್ಯ ಆಯಿತು.

ಮತ್ತೆ ಗಾಂಧಿ ಹುಟ್ಟಿ ಬಂದರೆ ಜನ ಹೇಗೆ ಅವರನ್ನು ಬರಮಾಡಿಕೊಳ್ಳುತ್ತಾರೆ. ಅದಕ್ಕೆ ಗಾಂಧಿ ಪ್ರತಿಕ್ರಿಯೆ ಹೇಗಿರುತ್ತೆ ಎನ್ನುವ ಅಂಶವನ್ನು ಬಿಂಬಿಸುವ ನಾಟಕ. ಗಾಂಧಿಯ ತತ್ವ ಮತ್ತು ಆಶಯದ ವೈಫಲ್ಯವನ್ನು ವಿಡಂಬನೆಯ ಈ ನಾಟಕದಲ್ಲಿ ಶಾಂತಿದೂತ ಅಹಿಂಸಾವಾದಿ ಗಾಂಧೀಜಿಯನ್ನೇ ಹಂತಕನಂತೆ ಚಿತ್ರಿಸುತ್ತಾರೆ. ಗಾಂಧೀಜಿ ನನ್ನನ್ನು ಕಾಡುತ್ತಲೇ ಇರುವ ವ್ಯಕ್ತಿತ್ವ. ಅದೇ ವಸ್ತುವನ್ನಾಗಿ ಇಟ್ಟುಕೊಂಡು 'ಗಾಂಧಿ ವೇಷ' ಸಿನಿಮಾ ಮಾಡಿದ್ದೇನೆ. ಇದರಲ್ಲಿ ಚಮ್ಮಾರ ಒಬ್ಬ ಗಾಂಧಿಯಾಗಿ ಚುನಾವಣೆ ಎದುರಿಸುವ ಸನ್ನಿವೇಶ ಬರುತ್ತದೆ. ಅದರ ಚಿತ್ರೀಕರಣ ಮುಗಿದಿದ್ದು, ತಾಂತ್ರಿಕ ಕೆಲಸ ನಡೆಯುತ್ತಿದೆ.

—ಕೆ.ಎಸ್.ಡಿ.ಎಲ್. ಚಂದ್ರು, ನಟ–ನಿರ್ದೇಶಕ